**ದಿನಾಂಕಃ 23-01-2024 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿ ಪರ ಶ್ರೀ.ಎಸ್ ಜಿ ಟಿ ವಕೀಲರಿಂದ:**

ನಾನು ಶಾಲೆ ಕಲಿತಿರುವುದಿಲ್ಲ. ನಾನು ಮಾರನಬೀಡ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಈ ಅಪಘಾತದ ಬಗ್ಗೆ ನನಗೆ ಮಾಹಿತಿ ಇದೆ. ಈ ಅಪಘಾತ ಯಾವ ದಿನಾಂಕ ಮತ್ತು ಸಮಯದಂದು ಆಯಿತು ಎಂಬುದು ನನಗೆ ಗೊತ್ತಿಲ್ಲ. ಈ ಅಪಘಾತ ಹೇಗಾಯಿತು ಎಂಬುದು ನಾನು ಪ್ರತ್ಯಕ್ಷವಾಗಿ

ನೋಡಿರುವುದಿಲ್ಲ. ಅಪಘಾತವಾದಾಗ ನಾನು ಊರಿನಲ್ಲಿದ್ದೆನು. ಅಪಘಾತವಾದ ವಿಚಾರವನ್ನು ಚಾಸಾ–9 ರವರು ನನಗೆ ನೇರವಾಗಿ ಫೋನ್ ಮೂಲಕ ತಿಳಿಸಿದರು. ಈ ಅಪಘಾತವು ಹೊಂಬಳಿ ಮತ್ತು ಬಿಂಗಾಪುರ ರಸ್ತೆಯಲ್ಲಿ ಆಗಿರುತ್ತದೆ. ಆ ದಿನ ಆರೋಪಿ ಬೆಳಗಲಪೇಟೆ ಕಡೆಯಿಂದ ಬರುತ್ತಿದ್ದರು. ಈ ಅಪಘಾತವು ಎರಡು ಗಾಡಿಗಳ ಮಧ್ಯದಲ್ಲಿ ಆಗಿರುತ್ತದೆ. ಅಪಘಾತವಾದ ಸ್ಥಳಕ್ಕೆ ನಾನೊಬ್ಬನೆ ಹೋದೆನು. ಅಪಘಾತವಾದ ಮೋಟಾರ್ ಸೈಕಲ ನಂಬರ ಕೆಎ–27/1822 ಎಂದರೆ ನಾನು ಶಾಲೆ ಕಲಿತಿಲ್ಲವಾದ ಕಾರಣ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ದಿನ ಯಾವ ಗಾಡಿಯ ಅಪಘಾತದಿಂದ ಬಸವರಾಜ ದಯಾನಂದ ಹರಲಾಪುರ ಎಂಬುವವರು ಮೃತಪಟ್ಟರು ಎಂಬುದು ನನಗೆ ಗೊತ್ತಿಲ್ಲ.

ಮೃತ ಬಸವರಾಜ ನನ್ನ ಅಣ್ಣನ ಮಗ. ಚಾಸಾ–6 ನನ್ನ ಸಂಬಂಧಿಕರಲ್ಲ. ಬೆಳಗಾಲಪೇಟೆಯಿಂದ ಹೊಂಬಳಿಗೆ ಬರುವ ರಸ್ತೆ ಅರ್ಧ ಕಚ್ಚಾ ರಸ್ತೆ ಮತ್ತು ಉಳಿದ ಅರ್ಧ ಭಾಗ ಟಾರ ರಸ್ತೆಯಿಂದ ಕೂಡಿರುತ್ತದೆ. ಆ ರಸ್ತೆ ಅಗ್ಗುತಗ್ಗು ಇರುವುದರಿಂದ ವಾಹನಗಳನ್ನು ಜೋರಾಗಿ ಚಲಾಯಿಸಲು ಬರುವುದಿಲ್ಲ ಎಂದರೆ ಸರಿ. ಅಪಘಾತದಿಂದ ಬಸವರಾಜ ಮತ್ತು ಚಾಸಾ–6 ರವರಿಗೆ ಗಾಯಗಳು ಆಗಿದ್ದವು. ಈ ಅಪಘಾತದಿಂದ ಮೃತ ಬಸವರಾಜಿನ ಕಾಲಿಗೆ ಪೆಟ್ಟಾಗಿತ್ತು. ಅದೇ ರೀತಿ ಚಾಸಾ–6 ರವರಿಗೂ ಸಹ ಪೆಟ್ಟಾಗಿತ್ತು. ಆರೋಪಿಗೆ ವಾಹನ ಚಲಾಯಿಸಲು ಡಿ ಎಲ್ ಮತ್ತು ಆ ಬೈಕ್ ಗೆ ವಿಮೆ ಇದ್ದ ಬಗ್ಗೆ ವಿಚಾರಿಸಿರುವುದಿಲ್ಲ. ಅದೇ ರೀತಿ ಕೆಎ–27/ಇಇ–5882 ರ ಮೋಟಾರ್ ಸೈಕಲಗೆ ವಿಮೆ ಹಾಗೂ ಅದರ ಚಾಲಕನಿಗೆ ಡಿ.ಎಲ್ ಇದ್ದ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ಅಪಘಾತವಾದ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಈ ಅಪಘಾತವು ಮೋಟಾರ ಸೈಕಲ ಸಂಖ್ಯೆ ಕೆಎ 27/5882 ರ ಸವಾರನ ತಪ್ಪಿನಿಂದ ಅಪಘಾತವಾಗಿದ್ದರೂ ಸಹ ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆ ದಿನ ಚಾಸಾ–6 ರವರು ಮೋಟಾರ್ ಸೈಕಲ ಮೂಲಕ ಬೆಳಗಾಲಪೇಟೆಗೆ ಹೋಗುತ್ತಿದ್ದರು. ಈ ಅಪಘಾತವಾದ ಸಂದರ್ಭದಲ್ಲಿ ಬಸವರಾಜ ಹರಲಾಪುರರವರೆ ವಾಹನ ಚಲಾಯಿಸಿ ಈ ಅಪಘಾತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ಗಾಯಾಳುಗಳನ್ನು ಬೆಳಗಾಲಪೇಟೆ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಗಾಯಾಳುಗಳನ್ನು ಟಾಟಾ ಏಸಿ ವಾಹನದ ಮೂಲಕ ಬೆಳಗಾಲಪೇಟೆ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಬೆಳಗಾಲಪೇಟೆಯಿಂದ

ಹುಬ್ಬಳ್ಳಿಗೆ ಗಾಯಾಗಳನ್ನು ನನ್ನ ತಮ್ಮ ಕರೆದುಕೊಂಡು ಹೋದನು. ಹುಬ್ಬಳ್ಳಿ ಆಸ್ಪತ್ರೆಯಲ್ಲಿ ಬಸವರಾಜ ಹರಲಾಪುರರವರು ಯಾವ ದಿನಾಂಕದಂದು ಮತ್ತು ಸಮಯದಂದು ಮೃತಪಟ್ಟರು ಎಂಬುದು ನನಗೆ ಗೊತ್ತಿಲ್ಲ. ದೂರನ್ನು ಪುಟ್ಟಪ್ಪ ಎಂಬುವವರು ಬರೆದರು. ದೂರನ್ನು ಮೊದಲೆ ಬರೆದಿದ್ದು, ಅದಕ್ಕೆ ಸಹಿ ಮಾಡು ಎಂದ ಕಾರಣ ಸಹಿ ಮಾಡಿರುತ್ತೇನೆ. ದೂರಿನಲ್ಲಿ ಬರೆದಿರುವ ವಿಚಾರವನು ನಾನು ಕೇಳಿ ತಿಳಿದುಕೊಂಡೆ ಸಹಿ ಮಾಡಿರುತ್ತೇನೆ. ಈ ಅಪಘಾತಕ್ಕೂ ಆರೋಪಿಗೂ ಯಾವುದೇ ಸಂಬಂದ ಇಲ್ಲದಿದ್ದರೂ ಸಹ ನಾನು ಪೊಲೀಸರ ಜೊತೆ ಮಿಲಾಪಿಯಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ

ಮತ್ತು ಜೆ.ಎಂ.ಎಫ್.ಸಿ, ಹಾನಗಲ್